ಇ ಸಿ ಎ ನಂ. 2/2023
ಪಿ ಡಬ್ಲ್ಯೂಃ 1
ದಿನಾಂಕ 04/06/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 2ನೇ ಎದುರುದಾರರ ಪರಃ ಶ್ರೀ ಜೆ ಪಿ ಎಲ್ ವಕೀಲರಿಂದಃ</u>

ನನಗೆ ನಾಲ್ಕು ಜನ ಮಕ್ಕಳು. ನಾನು ವಂಶವೃಕ್ಷವನ್ನಾಗಲಿ ತಹಸೀಲ್ದಾರ್ ಕಚೇರಿಯಿಂದ ಪಡೆದಂತಹ ಕುಟುಂಬ ಸದಸ್ಯರ ಪಟ್ಟಿಯನ್ನಾಗಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಅಂತಹ ದಾಖಲೆಗಳನ್ನು ಹಾಜರುಪಡಿಸದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನಾಲ್ಕು ಜನರೂ ಸಹ ಹೆಣ್ಣು ಮಕ್ಕಳಾಗಿರುತ್ತಾರೆ. ಅವರೆಲ್ಲರೂ ಮದುವೆಯಾಗಿ ಅವರವರ ಗಂಡನ ಮನೆಯಲ್ಲಿದ್ದಾರೆ ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತವಾಗಿದೆ ಎಂದು ನನಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ಯಾರೋ ಸಾರ್ವಜನಿಕರು ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆ ಬಗ್ಗೆ ನಾನು ಮತ್ತು ನನ್ನ ಮಗಳಾದ ಪೂಜಾರವರು ಪೊಲೀಸರಿಗೆ ಮಾಹಿತಿ ನೀಡಿರುತ್ತೇವೆ. ನಿಪಿ-4 ಮತ್ತು 5ರ ದಾಖಲೆಗಳಲ್ಲಿ ನಾನು ಉದ್ದೇಶಪೂರ್ವಕವಾಗಿ ನನ್ನ ಗಂಡನ ವಯಸ್ಸನ್ನು 56 ವರ್ಷ ಎಂದು ಕಡಿಮೆ ಬರೆಸಿರುತ್ತೇನೆ ಎಂದರೆ ಸಾಕ್ಷಿ ಅವರಿಗೆ 56 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ಪೋಲೀಸ್ ದಾಖಲೆಗಳಲ್ಲಿ ನನ್ನ ಗಂಡನ ವಯಸ್ಸು 65 ವರ್ಷ ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ. ಘಟನೆ ನಡೆಯುವ ಪೂರ್ವದಲ್ಲಿ ನನ್ನ ಗಂಡ ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕರಾಗಿದ್ದರು ಎಂದರೆ ಸರಿ. ಅವರಿಗೆ ಆರೋಗ್ಯ

ಸಮಸ್ಯೆ ಇದ್ದ ಕಾರಣ ಆ ಕೆಲಸಕ್ಕೆ ಹೋಗಲು ಬಿಟ್ಟಿದ್ದರೂ ರಾಜೀನಾಮೆ ಏನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಕೆ ಎಸ್ ಆರ್ ಟಿ ಸಿ ನಿವೃತ್ತ ಚಾಲಕರಾಗಿದ್ದರೂ ಎಂದು ಪೋಲೀಸರು ನನ್ನ ಹೇಳಿಕೆಯ ಮೇರೆಗೆ ನಮೂದು ಮಾಡಿರುತ್ತಾರೆ ಎಂದರೆ ಸುಳ್ಳು. ನಿಪಿ-15 ರಂತೆ ದಿನಾಂಕ 23/11/2021 ರಂದು ನನ್ನ ಗಂಡನಿಗೆ ಚಾಲನಾ ಪರವಾನಿಗಿ ಇರಲಿಲ್ಲ ಎಂದರೆ ಸುಳ್ಳು. ನಿಪಿ-12 ರ ಆಧಾರ್ ಕಾರ್ಡಿನಲ್ಲಿರುವ ನನ್ನ ಗಂಡನ ವಯಸ್ಸು ನಮೂದು ಮಾಡಿರುವುದು ಸರಿ ಇದೆಯಾ ಇಲ್ಲವಾ ಎಂದರೆ ಸಾಕ್ಷಿ ಸರಿ ಇದೆ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ಗಂಡನ ನಡುವೆ 8 ವರ್ಷ ವಯಸ್ಸಿನ ಅಂತರ ಇರುತ್ತದೆ.

ನನ್ನ ಗಂಡ 1 ನೇ ಎದುರುದಾರರ ಬಳಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಯಾವುದೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ಮಾಸಿಕ 15 ಸಾವಿರ ರೂ ಸಂಬಳ ಮತ್ತು ಪ್ರತಿದಿನ 200 ರೂ ಬಾಟಾ ಕೊಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ 1 ನೇ ಎದುರುದಾರರು ನಗದು ರೂಪದಲ್ಲಿ ಸಂಬಳ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ ಮತ್ತು 1 ನೇ ಎದುರುದಾರರ ನಡುವೆ ಕಾರ್ಮಿಕ ಮತ್ತು ಮಾಲೀಕ ಸಂಬಂದ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ವಾಹನ ಚಾಲನೆ ಮಾಡುವ ಸಮಯದಲ್ಲಿ ಮೃತ ಪಟ್ಟಿಲ್ಲ ಅವರ ಸಾವು ಬೇರೆ ವಿಧದಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ಪಟ್ಟ ದಿನ ಅವರಿಗೆ ಚಾಲನಾ ಪರವಾನಿಗಿ ಇರಲಿಲ್ಲ ಆದರೂ ಸಹ ಅಕ್ರಮ ಲಾಭ ಪಡೆಯುವ ಸಲುವಾಗಿ ನನ್ನ ಗಂಡ 1 ನೇ

ಎದುರುದಾರರ ಬಳಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು ಎಂದು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಚಾಲನೆ ಮಾಡುವ ಸಮಯದಲ್ಲಿ ವಾಹನವನ್ನು ಮರಕ್ಕೆ ಡಿಕ್ಕಿ ಹೊಡೆಯಿಸಿ ಮೃತ ಪಟ್ಟಿರುತ್ತಾರೆಂದು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ನನ್ನ ತಾಯಿ ಜತೆ ವಾಸಿಸುತ್ತಿದ್ದೇನೆ, ನನ್ನ ಜತೆ ನನ್ನ ಮೊಮ್ಮಕ್ಕಳು ಸಹ ಇದ್ದಾರೆ ಎಂದು ನುಡಿಯುತ್ತಾರೆ. ಶವ ಪರೀಕ್ಷಾ ವರದಿಯಲ್ಲಿ ನನ್ನ ಗಂಡ ಅಪಘಾತದಿಂದ ಮರಣ ಹೊಂದಿಲ್ಲ ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಕಾಯಿಲೆಗಳಿಂದ ಮೃತ ಪಟ್ಟಿರುತ್ತಾರೆ ಹೊರತು ಪ್ರಸ್ತುತ ಪ್ರಕರಣದಲ್ಲಿ ಹೇಳಿರುವಂತೆ ಅಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಚಾಲನಾ ಪರವಾನಿಗಿ ಇಲ್ಲದೆ ಇರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು 2 ನೇ ಎದುರುದಾರರು ನೀಡಿರುವ ಪಾಲಿಸಿ ನಿಬಂಧನೆಗಳನ್ನು ಮುರಿದಿರುವುದರಿಂದ 2 ನೇ ಎದುರುದಾರರು ನನಗೆ ಯಾವುದೇ ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.